**37** ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಲಯ, ಬೆಂಗಳೂರು

ಸಿ.ಸಿ. ನಂ. **27369/2018**

ಪ್ರಾ.ಸಃ **3** ಚಾ.ಸಃ **3**

| | |
|---|---|
| ಸಾಕ್ಷಿದಾರರ ಹೆಸರು | ಎನ್ರಿಕ್ ಹೆಚ್.ಇ |
| ತಂದೆಯ/ಗಂಡನ ಹೆಸರು | ಪುಷ್ಪರಾಜ್ |
| ವಯಸ್ಸು | 51 ವರ್ಷ |
| ಉದ್ಯೋಗ | ಚಾಲಕ |
| ವಿಳಾಸ | ವಿವೇಕ್ ನಗರ, ಬೆಂಗಳೂರು. |
| ಪ್ರ. ವ. ಬೋ ದಿನಾಂಕ | 10/03/2023 |

<u>ಮುಖ್ಯ ವಿಚಾರಣೆಃ ಮಾನ್ಯ ಹಿ.ಸ.ಸ. ಅ ರವರಿಂದಃ</u>

ನನಗೆ ಚಾಸಾ.1 ರವರ ಪರಿಚಯ ಇದೆ. ನಾನು ಅವರ ಬಳಿ ಚಾಲಕನಾಗಿ ಕೆಲಸ ಮಾಡುತ್ತೇನೆ. ಜೂನ್ 2017 ರಲ್ಲಿ ಚಾಸಾ.1 ರವರ ಸರ ಅಪಹರಣವಾಗಿದ್ದು, ಈ ಬಗ್ಗೆ ಪೊಲೀಸರು ನಾನು ಚಾಸಾ.1 ರವರ ಮನೆಯಲ್ಲಿದ್ದಾಗ ನನ್ನಿಂದ ಒಂದು ದಾಖಲೆಗೆ ಸಹಿ ಪಡೆದುಕೊಂಡಿರುತ್ತಾರೆ. ಸದರಿ ದಾಖಲೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.3 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.3(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಹಿ.ಸ.ಸ.ಅ. ರವರು ಅನುಮತಿ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಮಾನ್ಯ ಹಿ.ಸ.ಸ.ಅ ರವರಿಂದ</u>

ದಿ.01/06/2017 ರಂದು ಬೆಳಗ್ಗೆ 09 ರಿಂದ 10 ಗಂಟೆಯ ಸಮಯದಲ್ಲಿ ಪೊಲೀಸರು ನನ್ನನ್ನು ಜಯನಗರ 4 ನೇ ಬ್ಲಾಕ್, ಎನ್.ಎ.ಎಲ್ ಲೇಔಟ್ 1 ನೇ ಕ್ರಾಸ್ ನಲ್ಲಿರುವ ಮನೆ ನಂ.10 ರ ಬಳಿ ಕರೆಸಿ, ನನ್ನ ಸಮಕ್ಷಮ ನಿಪಿ.3 ರಂತೆ ಪಂಚನಾಮೆ ಮಾಡಿ,

ಸದರಿ ಪಂಚನಾಮೆಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ.ಹೇ. ಕೇ. ಸ. ಇ. ಒ

**37** ನೇ ಅ.ಮು. ಮ. ದಂ. ನ್ಯಾ